ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ




# ಮದ್ದೂರಿನಲ್ಲಿ ಸ್ತ್ರೀಶಕ್ತಿ ಸ್ವಚ್ಛ ವಾಹಿನಿಯ ಸಾರಥಿ

ನಾರಿ ಅಬಲೆ ಅಲ್ಲ ಸಬಲೆ ಎಂಬ ಮಾತು ರೂಢಿಯಾಗಿ ಅದೆಷ್ಟೋ ದಶಕಗಳೇ ಕಳೆದಿವೆ. ಹೆಣ್ಣು ಮನಸು ಮಾಡಿದರೆ ಎಲ್ಲವೂ ಸಾಧ್ಯ. ಆಕೆಯಿಂದ ಅಸಾಧ್ಯ ಎಂಬುದು ಯಾವುದೂ ಇಲ್ಲ. ಹಳ್ಳಿಯಿಂದ ದಿಲ್ಲಿಯವರೆಗೂ ಆಕೆ ಕಾಲಿಡದ ಕ್ಷೇತ್ರವಿಲ್ಲ, ಮಾಡದ ಕಾಯಕವಿಲ್ಲ. ಹೆಣ್ಣಿಗೆ ಹೆಣ್ಣೇ ಸ್ಫೂರ್ತಿ. ಹಳ್ಳಿಗಳಲ್ಲಿ ಸ್ವಚ್ಛತೆಯೆಂದರೆ ಮೂಗು ಮುರಿಯುವ ಕಾಲ ಕ್ರಮೇಣ ದೂರವಾಗುತ್ತಿದೆ. ಯಾಕೆಂದರೆ ಸ್ವಚ್ಛತಾ ಕ್ಷೇತ್ರಕ್ಕೆ ನಾರಿಶಕ್ತಿಯ ಪ್ರವೇಶವಾಗಿದೆ. ಇದಕ್ಕೊಂದು ಸ್ಪಷ್ಟ ಉದಾಹರಣೆಯೇ ಮಂಡ್ಯ ಜಿಲ್ಲೆಯ ಮದ್ದೂರು.

ಹಳ್ಳಿಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಯಕವನ್ನು ನಿತ್ಯ ನಿರಂತರವಾಗಿಸುವುದು ಸುಲಭದ ಮಾತಲ್ಲ. ಆದರೆ, ಮದ್ದೂರು ಹಾಗಿಲ್ಲ. ನಾರಿಯರು ಇಲ್ಲಿ ನಿತ್ಯವೂ ಸ್ವಚ್ಛತಾ ಸಿಬ್ಬಂದಿಯಾಗಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದು ಮಂಡ್ಯ ಜಿಲ್ಲೆಗಷ್ಟೇ ಅಲ್ಲ. ಕರ್ನಾಟಕವೇ ಹೆಮ್ಮೆಪಡುವ ವಿಷಯ. ಹಳ್ಳಿ ಹಳ್ಳಿಯೂ ಸ್ವಚ್ಛತೆಯಿಂದ ಘಮಘಮಿಸುವಂತೆ ಮಾಡಲು ಇಲ್ಲಿನ ಗ್ರಾಮ ಪಂಚಾಯಿತಿಗಳು ನಾರಿಶಕ್ತಿಯ ಜೊತೆಗೆ ಆಕೆಯ ನೈರ್ಮಲ್ಯ ಚತುರತೆಯನ್ನೂ ಸದ್ಬಳಕೆ ಮಾಡುತ್ತಿದೆ.

# ಮಹಿಳಾ ಒಕ್ಕೂಟಗಳೊಂದಿಗೆ ಒಡಂಬಡಿಕೆ, ಸೂಕ್ತ ತರಬೇತಿ

ಮದ್ದೂರು ತಾಲೂಕು ವ್ಯಾಪ್ತಿಯಲ್ಲಿ 42 ಗ್ರಾಮ ಪಂಚಾಯಿತಿಗಳಿವೆ. ಇದರಲ್ಲಿ 24 ಗ್ರಾಮ ಪಂಚಾಯಿತಿಗಳಲ್ಲಿ ಸ್ವಚ್ಛ ಸಂಕೀರ್ಣ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಇಲ್ಲಿ ಒಣ ಕಸ ಸಂಗ್ರಹಣೆ ಮತ್ತು ವಿಲೇವಾರಿಯ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿರುವ ಮಹಿಳಾ ಒಕ್ಕೂಟಗಳಿಗೆ ವಹಿಸಲಾಗಿದೆ. ಇದಕ್ಕಾಗಿ ಗ್ರಾಮ ಪಂಚಾಯಿತಿ ಹಾಗೂ ಮಹಿಳಾ ಒಕ್ಕೂಟಗಳ ನಡುವೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಪ್ರತಿಯೊಂದು ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೂ ಸ್ವಸಹಾಯ ಸಂಘದ ಆಸಕ್ತ ಮಹಿಳೆಯರನ್ನು ಗುರುತಿಸಿ ಅವರಿಗೆ ಸೂಕ್ತ ಚಾಲನಾ ತರಬೇತಿ ನೀಡಲಾಗಿದೆ. ಆ ಮೂಲಕ ಸ್ವಚ್ಛ ವಾಹಿನಿ ವಾಹನಗಳಿಗೆ ಸಾರಥಿಯಾಗಿ ನೇಮಿಸಲಾಗುತ್ತಿದೆ. ಅದರ ಜೊತೆಗೆ ಎಲ್ಲಾ ಮಹಿಳಾ ಸಿಬ್ಬಂದಿಗೆ ವೈಜ್ಞಾನಿಕವಾಗಿ ಕಸ ವಿಂಗಡಣೆ ಹಾಗೂ ವಿಲೇವಾರಿ ಕುರಿತು ತರಬೇತಿ ನೀಡಲಾಗಿದೆ.

ತಾಲೂಕಿನ ಹೆಮ್ಮನಹಳ್ಳಿ, ಚಿಕ್ಕರಸಿನಕೆರೆ, ಕೊಪ್ಪ, ಬೆಸಗರಹಳ್ಳಿ ಹೀಗೆ ವಿವಿಧ ಗ್ರಾಮಗಳಲ್ಲಿ ನಾರಿಶಕ್ತಿ ಕಾರ್ಯರೂಪಕ್ಕೆ ಬಂದಿದೆ. ತರಬೇತಿ ಪಡೆದ ಮಹಿಳೆಯರು ಕಸ ವಿಲೇವಾರಿಯಲ್ಲಿ ಕಾರ್ಯಪ್ರವೃತರಾಗಿದ್ದಾರೆ. ಅದರಲ್ಲೂ ಹೆಮ್ಮನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸ್ವಚ್ಛ ಸಂಕೀರ್ಣ ಘಟಕಕ್ಕೆ ರಾಷ್ಟ್ರ ಮಾತ್ರವಲ್ಲದೆ ಅಂತಾರಾಷ್ಟ್ರೀಯ ಮಟ್ಟದ ನಿಯೋಗಗಳು ಭೇಟಿ ನೀಡಿವೆ. ಇಲ್ಲಿ ಸ್ವಸಹಾಯ ಸಂಘದ ಮಹಿಳೆಯರು ಮುಂದೆ ನಿಂತು ಮಾಡುತ್ತಿರುವ ಕಸ ಸಂಗ್ರಹ ಹಾಗೂ ವಿಲೇವಾರಿಯು ರಾಜ್ಯಮಟ್ಟದಲ್ಲಿ ಗಮನ ಸೆಳೆದಿದೆ. ಇತರ ಗ್ರಾಮಗಳಲ್ಲೂ ಮಹಿಳೆಯರೇ ಕಸ ಸಂಗ್ರಹಣೆ ಕಾಯಕದಲ್ಲಿ ತೊಡಗಿದ್ದಾರೆ. ಇನ್ನುಳಿದ ಗ್ರಾಮಗಳಲ್ಲಿ ಮಹಿಳೆಯರ ಮನವೊಲಿಸಿ ಸ್ವಚ್ಛತಾ ಸಿಬ್ಬಂದಿಯಾಗಿಸುವ ಪ್ರಯತ್ನ ಮುಂದುವರೆದಿದೆ.

## ಕಸದಿಂದ ರಸ; ಮಹಿಳೆಯರಲ್ಲಿ ಆರ್ಥಿಕ ಸಬಲತೆ

ಮಹಿಳೆ ಮನೆಯಲ್ಲೇ ಕೂರಬೇಕು ಅಥವಾ ಮನೆಯಲ್ಲೇ ಕೆಲಸ ಮಾಡಬೇಕು ಎಂಬ ಕಾಲ ಇದಲ್ಲ. ಮನೆಯಿಂದ ಹೊರಗೆ ಹೋಗಿ ದುಡಿದು, ಸಂಪಾದನೆ ಮಾಡಿ ತಮ್ಮ ಕಾಲ ಮೇಲೆ ನಿಲ್ಲುವ ವಿಪುಲ ಅವಕಾಶ ಮಹಿಳೆಯರ ಮುಂದಿದೆ. ಮಹಿಳಾ ಸಂಘಗಳ ಮೂಲಕ ಮಹಿಳೆಯರೇ ಸೇರಿಕೊಂಡು ಕಸ ಸಂಗ್ರಹಿಸಿ, ವಿಲೇವಾರಿ ಮಾಡಿ ಬರುವ ಲಾಭ ಕೂಡಾ ನೇರವಾಗಿ ಆ ಮಹಿಳಾ ಸಂಘಕ್ಕೆ ಸೇರುತ್ತದೆ. ಇದು ತ್ಯಾಜ್ಯ ನಿರ್ವಹಣೆಯ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸುವ ಪ್ರತಿ ಮಹಿಳೆಯರಿಗೂ ಆದಾಯದ ಮೂಲವಾಗಿ, ಆರ್ಥಿಕವಾಗಿ ಸದೃಢರಾಗಲು ನೆರವಾಗಿದೆ.

ಕಸ ಸಂಗ್ರಹಿಸುವ ಮತ್ತು ಸ್ವಚ್ಛ ವಾಹಿನಿ ವಾಹನ ಚಾಲನೆ ಮಾಡುವವರಿಗೆ ವೇತನವನ್ನು ಆರಂಭದಲ್ಲಿ ಸರ್ಕಾರವೇ ನೀಡುತ್ತದೆ. ಆ ಬಳಿಕ ಕಸ ಕೊಡುವ ಪ್ರತಿ ಮನೆಯಿಂದ ಇಂತಿಷ್ಟು ಶುಲ್ಕ ಪಡೆಯಲಾಗುತ್ತದೆ. ಒಣ ಕಸವನ್ನು ಪ್ರತ್ಯೇಕಿಸಿ ಮಾರಾಟದಿಂದ ಬರುವ ಲಾಭದ ಹಣವೂ ಆಯಾ ಮಹಿಳಾ ಸಂಘಕ್ಕೆ ಸೇರುತ್ತದೆ. ಹೀಗಾಗಿ ಈ ಕಾಯಕಕ್ಕೆ ಮಹಿಳೆಯರು ಆಸಕ್ತಿಯಿಂದ ಸೇರಿಕೊಳ್ಳುತ್ತಾರೆ.

ಈಗಾಗಲೇ ರಾಜ್ಯದ ಹಲವು ಜಿಲ್ಲೆಗಳಲ್ಲಿ ಸ್ವಚ್ಛತಾ ಸಿಬ್ಬಂದಿಯಾಗಿ ಮಾತ್ರವಲ್ಲದೆ ಸ್ವಚ್ಛ ವಾಹಿನಿಯ ಸಾರಥಿಯಾಗಿ ಮಹಿಳಾಮಣಿಗಳು ಗಮನಸೆಳೆದಿದ್ದಾರೆ. ಇದಕ್ಕೆ ಮದ್ದೂರು ಹೊಸ ಸೇರ್ಪಡೆ. ಮಹಿಳೆಯರು ಇದ್ದಲ್ಲಿ ಸ್ವಚ್ಛತೆಗೆ ಏನೂ ಕೊರತೆಯಿಲ್ಲ ಎಂಬಂತೆ, ಗ್ರಾಮೀಣ ಮಟ್ಟದಲ್ಲಿ ಸ್ವಚ್ಛತಾ ಕಾರ್ಯ ಚುರುಕಾಗಲು ಇವರ ಮತ್ತಷ್ಟು ಕೊಡುಗೆಯ ಅಗತ್ಯವಿದೆ.







